ಸಾಕ್ಷಿಯನ್ನು ದಿಃ 15.06.2017 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ಜೆವಿಎಸ್‌ಕೆ ವಕೀಲರಿಂದಃ

ಬೆಳಗ್ಗೆ ಸಮಯದಲ್ಲಿ ಮನೆ ಮನೆಗೆ ನಂದಿನಿ ಹಾಲು ಹಾಕುತ್ತೇನೆ, ಸಾಯಂಕಾಲದ ಸಮಯದಲ್ಲಿ ವಡೆ ತಯಾರು ಮಾಡಿ ಮಾರುವ ಕೆಲಸ ಮಾಡುತ್ತೇನೆ. ಆದಾಯದ ಬಗ್ಗೆ ದಾಖಲೆ ಇಲ್ಲ, ಸದರಿ ವಡೆ ತಯಾರು ಮಾಡುವ ಕೆಲಸದಲ್ಲಿ ನನ್ನ ಪತ್ನಿ ಸಹಾಯ ಮಾಡುತ್ತಾರೆ. ವಡೆ ತಯಾರು ಮಾಡುವ ಕೆಲಸವನ್ನು ಮೈಸೂರಿನ ಜೆಪಿ ನಗರದ ಗೊಬ್ಬಳಿಮರದ ಬಳಿ ಮಾಡುತ್ತೇನೆ. ಪ್ರತಿ ತಿಂಗಳು ರೂ.15,000/- ಆದಾಯ ಇತ್ತೆಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಕಾಮಾಕ್ಷಿ ಆಸ್ಪತ್ರೆಯ ವೈದ್ಯರಾದ ಡಾಃ ಕಾಮತ್ ಇವರು ನನಗೆ ಚಿಕಿತ್ಸೆ ನೀಡಿರುತ್ತಾರೆ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ಕೊನೆಯ ಬಾರಿ ಮೂರು ವರ್ಷಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದೆನು. ಅಡ್ವಾನ್ಸ್ ಬಿಲ್‌ಗಳನ್ನು ಸೇರಿಸಿದ್ದೇವೆ ಅಂದರೆ ಸರಿ. ನಾನು ರಾಜರಾಜೇಶ್ವರಿ ರಸ್ತೆಯಿಂದ ಬಂದು ಲಿಂಕ್ ರಸ್ತೆಗೆ ಸೇರುವಾಗ ಅಪಘಾತ ಆಗಿದೆ ಅಂದರೆ ಸರಿ. ಲಿಂಕ್ ರಸ್ತೆಯಲ್ಲಿ ಟೆಂಪೋದಲ್ಲಿ ಸರಿಯಾದ ರಸ್ತೆಯಿಂದ ಬರುತ್ತಿದ್ದನು ಅಂದರೆ ಸರಿ. ನಾನು ಚಿಕ್ಕವನಿದ್ದಾಗಿನಿಂದಲೂ ಸೈಕಲ್ ಚಾಲನೆ ಮಾಡುತ್ತಿದ್ದೇನೆ, ರಸ್ತೆಯ ಎಡಭಾಗದಲ್ಲಿ ಹೋಗಬೇಕು ಎಂದು ಗೊತ್ತಿದೆ. ಎಡಭಾಗದ ಫುಟ್‌ಪಾತ್‌ನಿಂದ 18 ಅಡಿ ದೂರದಲ್ಲಿ ಅಪಘಾತ ಆಗಿದೆ ಅಂದರೆ ಸಾಕ್ಷಿಯು ನಾನು ಮುಂದೆ ಹೋಗುವಾಗ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ರಸ್ತೆಯ ಎಡಭಾಗದಲ್ಲಿ ಹೋಗಿದ್ದರೆ ಅಪಘಾತ ಆಗುತ್ತಿರಲಿಲ್ಲ ಮತ್ತು ನನ್ನ ತಪ್ಪಿನಿಂದ ಆಗಿದೆ ಅಂದರೆ ಸರಿಯಲ್ಲ. ಆಧಾರ್ ಕಾರ್ಡ್ ಹಾಜರುಪಡಿಸಲು ತೊಂದರೆ ಇಲ್ಲ. ವಿಮಾ ಕಂಪನಿಯವರು ಬಂದು ನನ್ನಿಂದ ದಾಖಲೆ ಪಡೆದಿರುತ್ತಾರೆ ಅಂದರೆ ಸರಿ. ಈಗ ತೋರಿಸುತ್ತಿರುವ ಆಧಾರ್‌ಕಾರ್ಡ್‌ನ ಜೆರಾಕ್ಸ್ ಪ್ರತಿ ನನ್ನದೇ ಇರುತ್ತದೆ, ಅದನ್ನು ನಿಆರ್.1 ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ

ವಿಳಾಸ ಮತ್ತು ಜನ್ಮದಿನಾಂಕ ಸರಿ ಇದೆ. ನಿಆರ್ 1 ರ ಪ್ರಕಾರ ನನಗೆ 66 ವರ್ಷ ವಯಸ್ಸಾಗಿದೆ ಅಂದರೆ ಸರಿ. ನಿಪಿ. 9 ನ್ನು ದಿನಾಂಕ 12.04.2013 ರಂದು ನೀಡಿರುತ್ತಾರೆ ಅಂದರೆ ಸರಿ.

ಅಪಘಾತಕ್ಕಿಂತ ಪೂರ್ವದ ಕೆಲವು ಮೆಡಿಕಲ್ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿಲ್‌ನಷ್ಟು ಮೊತ್ತ ಖರ್ಚಾಗಿಲ್ಲ ಅಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ತೊಂದರೆ ಆಗಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ,

ಸಹಿ/-
ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.